# ನಮ್ಮಯ ತಿಮ್ಮ

■ **ಶ್ರುತಿ ತಾರಗೋಡ್**
ಕಲೆ: ಸಂತೋಷ್ ಸಸಿಹಿತ್ಲು

ಕರಿ ಬಿಳಿ ಹಂಡಾಪಟ್ಟೆ
ಇವ್ನು ಚೂಟಿ ಸಿಕ್ಕಾಪಟ್ಟೆ
ನಾಯಿ ಅಂತ ಕರೆದ್ರೆ
ತುಂಬಾ ಸಿಟ್ಟು ಮಾಡ್ತಾಯ್ತೆ
ತಿಮ್ಮ ಅಂತಾನೇ ಕರೀಬೇಕಂತೆ
ಇವ್ನಿಗೆ ತುಂಬಾ ಇಷ್ಟ ನನ್ ಕಂಡ್ರೆ

ಕುರುಕುಲು ತಿಂಡಿ ಏನೇ ಮಾಡ್ಲಿ
ಅಡುಗೆ ಮನೆಯಲಿ ನಮ್ಮಮ್ಮ
ಎಲ್ಲೇ ಇದ್ರೂ ವಾಸನೆ ಹಿಡ್ದು
ಓಡಿ ಬರ್ತಾನೆ ನಮ್ ತಿಮ್ಮ

ಪಕ್ಕದ ಮನೆಯ ಬೆಳ್ಳಿ ಬೆಕ್ಕು
ತಿಮ್ಮಗೆ ಬಾಳ ಫೇವ್ರೇಟು
ಕುಯ್ ಕುಯ್ ಅಂತ ಪಾಲು ಕೇಳ್ತಾರೆ
ನಾನ್ ತಿಂತಾ ಇದ್ರೆ ಚಾಕಲೇಟು

ಕುರ್ಕುರೆ ತಿಂದ್ರೆ ಅರ್ಧ ಪ್ಯಾಕೇಟ್
ನಾ ಇವ್ನಿಗೆ ಕೊಡ್ಲೇ ಬೇಕು
ತಿಂತಾ ತಿಂತಾ ಮಲಗುವ ಮುನ್ನ
ಟಾಮೆಂಜರಿ ನೋಡಲೇ ಬೇಕು

ಕಳಿಬಹುದು ಇಡೀ ದಿನ
ನೋಡ್ತಾ ನೋಡ್ತಾ ಇವ್ನ ಆಟನ
ಇವ್ನೇ ನಮ್ಮಯ ತಿಮ್ಮ
ನೋಡೋಕೆಷ್ಟು ಚೆನ್ನ
ನಮ್ಮೆಲ್ರ ಮುದ್ದು ಗುಮ್ಮ





## ಕುಂಚ ಪ್ರಪಂಚ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in





**ವೈನವಿ ಎಂ. ಅರಸ್**
7ನೇ ತರಗತಿ
ಬ್ರಿಗೇಡ್ ಶಾಲೆ, ಜೆ.ಪಿ.ನಗರ,
ಬೆಂಗಳೂರು



**ನಿಶ್ಚಿಂತ್ ಗೌಡ ಸಿ.ಎ.**
1ನೇ ತರಗತಿ
ಲಿಟಲ್ ಏಂಜೆಲ್ಸ್ ಮಾಡ್ರನ್ ಹೈಸ್ಕೂಲ್,
ಬೆಂಗಳೂರು